**<u>ದಿನಾಂಕಃ 06.03.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್.ಎ.ಎ ವಕೀಲರಿಂದಃ</u>**

ಆರೋಪಿ ನನಗೆ ಸುಮಾರು 7 - 8 ವರ್ಷಗಳಿಂದ ಪರಿಚಯವಿರುತ್ತಾರೆ. ನಮ್ಮ ಮತ್ತು ಆರೋಪಿಯ ಸ್ನೇಹಿತರ ಮುಖಾಂತರ ಮತ್ತು ಆರೋಪಿಯು ಒಂದು ಮೆಡಿಕಲ್ ಸ್ಟೋರ್ ಇದ್ದು ನನಗೆ ಅವರ ಪರಿಚಯ ಇರುತ್ತದೆ. ಆರೋಪಿಗೆ ಮತ್ತೊಬ್ಬ ಸಹೋದರ ಇರುತ್ತಾರೆ. ಆರೋಪಿಯ ತಂದೆಯ ಹೆಸರು ವಿಶ್ವೇಶ್ವರಯ್ಯ, ಆರೋಪಿಯ ಅಣ್ಣನ ಹೆಸರು ಶಿವಕುಮಾರ

ಅವರ ಪರಿಚಯ ನನಗೆ ಇರುವುದಿಲ್ಲ. ಬಸವಾಪಟ್ಟಣದಲ್ಲಿ ನಿವೇಶನ ಖರೀದಿಸಲು ನನ್ನ ಬಳಿ ಆರೋಪಿ 5 ಲಕ್ಷ ಸಾಲ ಪಡೆದಿದ್ದರು. ಬಸವಾಪಟ್ಟಣದಲ್ಲಿ ಎಲ್ಲಿ ನಿಖರವಾಗಿ ಖರೀದಿಸಿದರು ಎಂಬುದು ನನಗೆ ತಿಳಿದಿರುವುದಿಲ್ಲ. ಆರೋಪಿ ಯಾರಿಂದ ನಿವೇಶನವನ್ನು ಖರೀದಿಸಿರುತ್ತಾರೆ ಎಂಬುದು ನನಗೆ ತಿಳಿದಿರುವುದಿಲ್ಲ. ಯಾವ ಅಳತೆಯ ನಿವೇಶನ ಎಂಬುದು ನನಗೆ ತಿಳಿದಿರುವುದಿಲ್ಲ. ಯಾವ ತಾರೀಖಿನಂದು ನೋಂದಣಿಯಾಯಿತು ಮತ್ತು ಕ್ರಯದ ಕರಾರು ಆಯಿತು ಎಂಬುದು ತಿಳಿದಿರುವುದಿಲ್ಲ. ಆರೋಪಿಯ ಬಳಿ ನಿವೇಶನ ಇರುವುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ನಿವೇಶನದಲ್ಲಿ ಆರೋಪಿಯು ಮನೆ ಕಟ್ಟಿರುವ ಬಗ್ಗೆ ಅಥವಾ ಆ ನಿವೇಶನವನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ.

ನಾನು ಪಿ.ಯು.ಸಿ ವರೆಗೂ ಓದಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ ಎಷ್ಟು ಜಮೀನು ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ 5 ಎಕರೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಇರುತ್ತಾರೆ. ನಮ್ಮ ತಂದೆಗೆ ಒಟ್ಟು ಮೂರು ಜನ ಮಕ್ಕಳು, ನಾನು ಕೊನೆಯ ಮಗ. ನಮ್ಮ ಮನೆಯ ವ್ಯವಹಾರವನ್ನು ನಾನು ಮತ್ತು ನನ್ನ ತಂದೆ ನೋಡಿಕೊಳ್ಳುತ್ತೇವೆ. ನನ್ನ ಅಕ್ಕನಿಗೆ ಮದುವೆಯಾಗಿರುತ್ತದೆ ಮತ್ತು ನನ್ನ ಅಣ್ಣ ಬೆಂಗಳೂರಿನಲ್ಲಿ ವಾಸವಿರುತ್ತಾರೆ. ಸದರಿ ಜಮೀನಿನ ಸಂಖ್ಯೆ ಸರ್ವೇ ನಂ 84/4, 1 ಎಕರೆ 20 ಗುಂಟೆ ಮತ್ತು ಸರ್ವೆ ನಂ 31 ರಲ್ಲಿ 1 ಎಕರೆ, ಬೆಟ್ಟದಹಳ್ಳಿಯಲ್ಲಿ ಇರುತ್ತದೆ. ಮತ್ತೊಂದು ಸರ್ವೇ ನಂ 201*, ಮಗ್ಗೆ ಕಾವಲಿನಲ್ಲಿ ಇರುತ್ತದೆ. ಇವೆಲ್ಲಾ ಆಸ್ತಿಗಳು ಪಿತ್ರಾರ್ಜಿತ ಸ್ವತ್ತುಗಳು. ಸದರಿ ಜಮೀನಿನಲ್ಲಿ ಸುಮಾರು 20 ಗುಂಟೆ ತೋಟವಿರುತ್ತದೆ ಮತ್ತು ತೆಂಗು ಇರುತ್ತದೆ. ಸದರಿ ಜಮೀನುಗಳ ಮೇಲೆ ನಾನಾಗಲೀ ನನ್ನ ತಂದೆಯಾಗಲೀ ಸಾಲ ಮಾಡಿರುವುದಿಲ್ಲ. ನಮ್ಮ ತಂದೆ ಯಾವ ಬ್ಯಾಂಕಿನಲ್ಲಿ ವ್ಯವಹಾರ ಮಾಡುತ್ತಾರೆ ಎಂಬುದು ತಿಳಿದಿರುವುದಿಲ್ಲ. ದಿನಾಂಕ 02.01.2023 ರಂದು ನೀವು ಆರೋಪಿಗೆ 5 ಲಕ್ಷ ಹಣವನ್ನು ನೀಡಿರುವುದಾಗಿ ಹೇಳಿರುತ್ತೀರಿ ಹಾಗಾದರೆ ಸದರಿ ಹಣವು ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿಯು ಶುಂಠಿ ಬೇಳೆಯಿಂದ ಬಂದ ಆದಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ಎರಡೂವರೆ ಎಕರೆ ಜಮೀನಿನಲ್ಲಿ ಶುಂಠಿ ಹಾಕಿದ್ದೆವು. ಸದರಿ ಶುಂಠಿಯನ್ನು ಮುಸಲ್ಮಾನರಿಗೆ ಮಾರಿರುತ್ತೇನೆ ಆದರೆ ಅವರು ಯಾವುದೇ ರಶೀದಿಯನ್ನು ನೀಡಿರುವುದಿಲ್ಲ. ಅವರು ಹಣವನ್ನು ನಗದು ರೂಪದಲ್ಲಿ ನೀಡಿರುತ್ತಾರೆ. ಆ ದಿನ ನನಗೆ 8 ಲಕ್ಷ ಹಣ ಬಂದಿರುತ್ತದೆ. ನಾನು ಆರೋಪಿಗೆ 500 ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. ಆರೋಪಿಗೆ ಸಾಲವನ್ನು ಯಾವ ಭದ್ರತೆಯ ಮೇಲೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ಆರೋಪಿಯು ಒಂದು ಚೆಕ್ ನ್ನು ಬರೆದುಕೊಂಡು ಬಂದು ನನಗೆ ನೀಡಿದ ಮೇರೆಗೆ ನಾನು ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಬಳಿ ಹಣವನ್ನು 02.01.2023 ರಂದು ಸಂಜೆ 6.00 ಗಂಟೆ ಸುಮಾರಿಗೆ ಕೇಳಿರುತ್ತಾರೆ. ಆರೋಪಿಯು ನನ್ನ ಮನೆಗೆ ಬಂದು ಸಾಲವನ್ನು ಕೇಳಿದ್ದರು. ಆಗ ಮನೆಯಲ್ಲಿ ನಾನು ಒಬ್ಬನೇ ಇದ್ದೆ. ಆರೋಪಿಯು ನನ್ನ ಬಳಿ 5 ಲಕ್ಷ ಹಣವನ್ನು ಕೇಳುತ್ತಿರುವ ಬಗ್ಗೆ ನಾನು ನನ್ನ ತಂದೆಗೆ ಹೇಳಿರುವುದಿಲ್ಲ. ನಾನು

ಹಣವನ್ನು 6 ಗಂಟೆಗೆ ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಆರೋಪಿ ಬಂದು ನೀರು ಕುಡಿದ ಮೇಲೆ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಮಕ್ಕಳು, ನನ್ನ ಅಮ್ಮ ಅಪ್ಪ ಇರುತ್ತೇವೆ. ಆ ದಿನ ನಮ್ಮ ಮನೆಯವರು ಬೆಟ್ಟದಪುರ ದೇವಸ್ಥಾನಕ್ಕೆ ಹೋಗಿದ್ದರಿಂದ ಮನೆಯಲ್ಲಿ ಯಾರು ಇರಲಿಲ್ಲ. ನನ್ನ ಹಣದ ವ್ಯವಹಾರವು ಕರ್ನಾಟಕ ಬ್ಯಾಂಕ್, ಅರಕಲಗೂಡು ಶಾಖೆಯಲ್ಲಿರುತ್ತದೆ. ವ್ಯವಸಾಯದಿಂದ ಬಂದ ಹಣವನ್ನು ಬ್ಯಾಂಕಿಗೆ ಠೇವಣಿ ಮಾಡುತ್ತಿದ್ದೀರಾ ಎಂದರೆ ಸಾಕ್ಷಿಯು ನಾನು ಹಾಗೆ ನನ್ನ ಬಳಿ ಇಟ್ಟುಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ವ್ಯವಸಾಯದಿಂದ ಬಂದ ಹಣವನ್ನು ನಾನು ಬ್ಯಾಂಕಿಗೆ ಹಾಕಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**